# ಶ್ರೀಕೃಷ್ಣಲೀಲೆ



**ಹಸು,** ಒಂದಿ ತವುಡು ಹಾಕಿದ ಕಲಗಚ್ಚನ್ನು ಬಹಳವಾಗಿ ಪ್ರೀತಿಸುವಂತೆ ಭಗವಂತ ವಿನೀತರ, ದೀನರ ಭಕ್ತಿಯನ್ನು ಬಹಳವಾಗಿ ಪ್ರೀತಿಸುತ್ತಾನೆ. ದುರ್ಯೋಧನ ತನ್ನ ವಿಪುಲ ಹಣ, ಐಶ್ವರ್ಯ ಇವುಗಳ ವೈಭವವನ್ನು ಶ್ರೀಕೃಷ್ಣನ ಮುಂದೆ ಪ್ರದರ್ಶಿಸಲಾರಂಭಿಸಿದ. ಆದರೆ ಶ್ರೀಕೃಷ್ಣ ಆತನ ಆತಿಥ್ಯವನ್ನು ಸ್ವೀಕರಿಸದೆ ಬಡವ ವಿದುರನ ಆತಿಥ್ಯವನ್ನು ಸ್ವೀಕರಿಸಿದ. ಹಸು ತನ್ನ ಕರುವಿನ ಕಡೆಗೆ ಓಡಿ ಓಡಿ ಹೋಗುವ ಹಾಗೆ ಭಗವಂತ ಭಕ್ತರ ಕಡೆಗೆ ಓಡಿ ಓಡಿ ಹೋಗುತ್ತಾನೆ.

ಶ್ರೀಕೃಷ್ಣನ ಹೆಸರು ಕಿವಿಗೆ ಬಿದ್ದೊಡನೆಯೇ ಚೈತನ್ಯದೇವನ ಕಣ್ಣುಗಳಿಂದ ಪ್ರೇಮಾಶ್ರು ಸುರಿಯುತ್ತಿತ್ತು. ಭಗವಂತನೇ ನಿಜವಾದ ವಸ್ತು; ಉಳಿದುದೆಲ್ಲಾ ಅವಸ್ತು. ಮೇಘ ಕಣ್ಣಿಗೆ ಬಿತ್ತು ಎಂದರೆ, ನೀಲಿವಸ್ತ್ರ ಕಣ್ಣಿಗೆ ಬಿತ್ತು ಎಂದರೆ, ಕೃಷ್ಣನ ಪಟ ಕಣ್ಣಿಗೆ ಬಿತ್ತು ಎಂದರೆ, ರಾಧೆಗೆ ಕೃಷ್ಣನ ಉದ್ದೀಪನವಾಗುತ್ತಿತ್ತು. ಆಕೆ ಇವನ್ನೆಲ್ಲಾ ನೋಡಿ ಉನ್ಮತ್ತಳಂತೆ "ಎಲ್ಲಿ ಕೃಷ್ಣ?" ಎಂದು ವ್ಯಾಕುಲಳಾಗಿಬಿಡುತ್ತಿದ್ದಳು.



ಗೋಪಿಯರು ಶ್ರೀಕೃಷ್ಣನೊಡನೆ ಐಕ್ಯವಾಗಲು ಕಾತ್ಯಾಯನಿಯ ಪೂಜೆ ಮಾಡಿದರು. ಎಲ್ಲರೂ ಮಹಾಮಾಯೆ ಆದ್ಯಾಶಕ್ತಿಗೆ ಅಧೀನರು. ಅವತಾರಾದಿಗಳು ಕೂಡ ಮಾಯೆಯನ್ನು ಆಶ್ರಯಿಸಿ ತಮ್ಮ ಲೀಲೆಯನ್ನು ನಡೆಸುತ್ತಾರೆ. ಆದಕ್ಕಾಗಿಯೇ ಅವರು ಆದ್ಯಾಶಕ್ತಿಯನ್ನು ಪೂಜಿಸಿದರು.

ಯಶೋದೆ ಭಾವಿಸುತ್ತಿದ್ದಳು : "ನಾನು ಗೋಪಾಲನ ಯೋಗಕ್ಷೇಮ ನೋಡಿಕೊಳ್ಳದಿದ್ದರೆ, ಬೇರೆ ಯಾರು ತಾನೆ ನೋಡಿಕೊಳ್ಳುತ್ತಾರೆ? ನಾನು ನೋಡಿಕೊಳ್ಳದಿದ್ದರೆ ಅವನು ಕಾಯಿಲೆ ಬಿದ್ದುಬಿಡುತ್ತಾನೆ." ಶ್ರೀಕೃಷ್ಣ ಸಾಕ್ಷಾತ್ ಭಗವಂತ ಎಂಬ ಬೋಧೆ ಯಶೋದೆಗಿರಲಿಲ್ಲ. ಉದ್ಧವ ಯಶೋದೆಗೆ ತಿಳಿಸಿದ : "ತಾಯೆ, ನಿಮ್ಮ ಕೃಷ್ಣ ಸಾಕ್ಷಾತ್ ಭಗವಂತನೇ; ಜಗಚ್ಚಿಂತಾಮಣಿಯೇ. ಆತ ಸಾಮಾನ್ಯ ಮನುಷ್ಯನಲ್ಲ." ಯಶೋದೆ ಹೇಳಿದಳು: "ನೋಡಿಲ್ಲಿ, ನಾನು ಕೇಳಿದ್ದು ನಿಮ್ಮ ಚಿಂತಾಮಣಿಯ ವಿಷಯ ಅಲ್ಲ; ನನ್ನ ಗೋಪಾಲ ಹೇಗಿದ್ದಾನೆ ಎಂಬುದಾಗಿ. ಚಿಂತಾಮಣಿಯನ್ನಲ್ಲ, ನನ್ನ ಗೋಪಾಲನನ್ನು."

ಗೋಪಿಯರದು ಎಂಥಾ ನಿಷ್ಠೆ! ಅವರು ಮಥುರೆಗೆ ಹೋಗಿ ದ್ವಾರಪಾಲಕನನ್ನು ಬಹಳವಾಗಿ ಬೇಡಿಕೊಂಡು ಸಭಾಮಂದಿರವನ್ನು ಪ್ರವೇಶ ಮಾಡಿದರು. ದ್ವಾರಪಾಲಕ ಅವರನ್ನು ಶ್ರೀಕೃಷ್ಣನ ಹತ್ತಿರಕ್ಕೆ ಕರೆದುಕೊಂಡು ಹೋದ. ಆದರೆ ಅಲ್ಲಿ ರುಮಾಲು ಸುತ್ತಿರುವ ಶ್ರೀಕೃಷ್ಣನನ್ನು ಕಂಡು, ತಲೆ ತಗ್ಗಿಸಿ ತಮ್ಮೊಳಗೇ ಮಾತಾಡಿಕೊಳ್ಳಲಾರಂಭಿಸಿದರು: "ತಲೆಗೆ ರುಮಾಲು ಸುತ್ತಿ ಕುಳಿತಿದ್ದಾನಲ್ಲ, ಇವನಾರು? ಈತನೊಡನೆ ಮಾತುಕತೆಯಾಡಿ ಕೊನೆಗೆ ನಾವು ಶ್ರೀಕೃಷ್ಣನಲ್ಲಿಟ್ಟಿರುವ ನಿಷ್ಠಾಭಕ್ತಿಯನ್ನು ಕಳೆದುಕೊಳ್ಳೋಣವೇ? ಪೀತಾಂಬರಧಾರಿಯಾದ, ನವಿಲುಗರಿಯ ಕಿರೀಟ ಧರಿಸಿರುವ ನಮ್ಮ ಪ್ರಾಣವಲ್ಲಭ ಶ್ರೀಕೃಷ್ಣನೆಲ್ಲಿ?"

ನೋಡಿದಿರೋ, ಗೋಪಿಯರ ನಿಷ್ಠೆ ಎಷ್ಟು ಅದ್ಭುತವಾದದ್ದು! ಬೃಂದಾವನದವರ ಭಾವ ಬಹಳ ವಿಶೇಷವಾದದ್ದು. ಕೇಳಿದ್ದೇನೆ, ದ್ವಾರಕೆಯ ಜನರು ಅರ್ಜುನನ ಸಖನಾದ ಶ್ರೀಕೃಷ್ಣನನ್ನು ಪೂಜಿಸುತ್ತಾರೆ, ರಾಧೆಯನ್ನು ತಿರಸ್ಕರಿಸುತ್ತಾರೆ ಎಂಬುದಾಗಿ."

ಉದ್ಧವ ಬೃಂದಾವನಕ್ಕೆ ಬಂದಾಗ ಗೋವಳರು ಮತ್ತು ಗೋಪಿಯರು ಅತ್ಯಾತುರತೆಯಿಂದ ಓಡಿ ಬಂದು ಆತನನ್ನು ಸಂಧಿಸಿ ಕೇಳಿದರು : "ನಮ್ಮ ಕೃಷ್ಣ ಹೇಗಿದ್ದಾನೆ? ಏನು, ಆತ ನಮ್ಮನ್ನು ಸಂಪೂರ್ಣವಾಗಿ ಮರೆತುಬಿಟ್ಟನೇ? ನಮ್ಮನ್ನು ಎಂದಾದರೂ ಜ್ಞಾಪಿಸಿಕೊಳ್ಳುತ್ತಿರುವನೇ?" ಹೀಗೆಂದು ವಿಚಾರಿಸಿ ಅವರಲ್ಲಿ ಕೆಲವರು ಸುಮ್ಮನೆ ಬಿಕ್ಕಿ ಬಿಕ್ಕಿ ಅಳಲಾರಂಭಿಸಿದರು. ಇನ್ನು ಕೆಲವರು ಆತನನ್ನು ಬೃಂದಾವನದ ವಿವಿಧ ಸ್ಥಳಗಳಿಗೆ ಕರೆದುಕೊಂಡು ಹೋಗಿ ಹೇಳಲಾರಂಭಿಸಿದರು : "ಈ ಸ್ಥಳದಲ್ಲಿ ಶ್ರೀಕೃಷ್ಣ ಗೋವರ್ಧನ ಧಾರಣೆ ಮಾಡಿದ; ಇಲ್ಲಿ ಧೇನುಕಾಸುರನನ್ನು ವಧಿಸಿದ; ಇಲ್ಲಿ ಶಕಟಾಸುರನನ್ನು ಕೊಂದ; ಈ ಹುಲ್ಲುಗಾವಲಿನಲ್ಲಿ ಗೋವುಗಳನ್ನು ಮೇಯಿಸುತ್ತಿದ್ದ; ಯಮುನೆಯ ಈ ತೀರದಲ್ಲಿ ಗೋಪಿಯರೊಡನೆ ವಿಹರಿಸಿದ; ಇಲ್ಲಿ ಗೋವಳರೊಡನೆ ಆಟವಾಡಿದ." ಉದ್ಧವ ಅವರಿಗೆ ಹೇಳಿದ : "ನೀವು ಕೃಷ್ಣನಿಗಾಗಿ ಇಷ್ಟೊಂದು ಕಾತರರಾಗಿದ್ದೀರಲ್ಲ ಏಕೆ? ಆತ ಸರ್ವಭೂತಗಳಲ್ಲಿಯೂ ಇದ್ದಾನೆ. ಆತ ಸಾಕ್ಷಾತ್ ಭಗವಂತನೇ. ಆತ ಅಂತರ್ಯಾಮಿಯಾಗಿಲ್ಲದ ವಸ್ತುವೇ ಇಲ್ಲ." ಗೋಪಿಯರು ಹೇಳಿದರು: "ನಮಗೆ ಅದೊಂದೂ ಅರ್ಥವಾಗುವುದಿಲ್ಲ. ನಮಗೆ ಓದು ಬರಹ ಏನೂ ಗೊತ್ತಿಲ್ಲ. ನಮಗೆ ಕೇವಲ ಬೃಂದಾವನದ ಕೃಷ್ಣ ಮಾತ್ರ ಗೊತ್ತು. ಇಲ್ಲಿ ಆತ ಅನೇಕ ವಿಧವಾಗಿ ಕ್ರೀಡಿಸಿ ಹೋಗಿದ್ದಾನೆ." ಉದ್ಧವ ಹೇಳಿದ : "ಆತ ಸಾಕ್ಷಾತ್ ಭಗವಂತನೇ. ಆತನ ಧ್ಯಾನ ಮಾಡಿದರೆ ಮತ್ತೆ ಜನ್ಮವೆತ್ತಬೇಕಾಗಿರುವುದಿಲ್ಲ; ಮುಕ್ತಿ ದೊರೆತುಬಿಡುತ್ತದೆ." ಗೋಪಿಯರು ಹೇಳಿದರು: "ನಮಗೆ ಮುಕ್ತಿ ಎಂಬ ವಿಷಯ ತಲೆಗೇ ಹತ್ತುವುದಿಲ್ಲ. ನಮಗೆ ನಮ್ಮ ಪ್ರಾಣಪ್ರಿಯನಾದ ಶ್ರೀಕೃಷ್ಣ ಮಾತ್ರ ಬೇಕು."

**ಶ್ರೀರಾಮಕೃಷ್ಣ ವಚನವೇದ** ದಿಂದ